ಶ್ರೀ ಆರ್. ಎಲ್ ಜಾಲಪ್ಪ (ಕುಂದಾಯ ಮಂತ್ರಿಗಳು) : (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ 1992-93 ನೇ ಸಾಲಿನಿಂದಲೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿರುತ್ತದೆ. ಸದರಿ ಕಾಲೇಜಿನ ಸ್ವಂತ ಕಟ್ಟಡಕ್ಕೆ 4 ಎಕರೆ ಭೂಮಿಯನ್ನು ಒದಗಿಸಲಾಗಿದೆ. ಸದರಿ ಕಾಲೇಜಿನ ಮೊದಲನೇ ಹಂತದ ಕಟ್ಟಡ ನಿರ್ಮಾಣಕ್ಕಾಗಿ ನಕ್ಷೆ ಮತ್ತ ರೂ. 10 ಲಕ್ಷಗಳ ಅಂದಾಜು ಪಟ್ಟಿಗೆ ದಿನಾಂಕ 11.9.94ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಅನಂತರ ಮಂಗಳೂರಿನ ಲೋಕೋಪಯೋಗಿ ಇಲಾಖೆಯು ಈ ಕಾಮಗಾರಿಗೆ ಪರಿಷ್ಕೃತ ನಕ್ಷೆ ಮತ್ತು ರೂ. 17.00 ಲಕ್ಷಗಳ ಅಂದಾಜು ಪಟ್ಟಿಯನ್ನು 1995-96ನೇ ಸಾಲಿನ ಪರಿಷ್ಕೃತ ದರ ಪಟ್ಟಿಯಂತೆ ತಯಾರಿಸಿದ್ದು ಸದರಿ ಪರಿಷ್ಕೃತ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಸರ್ಕಾರದ ಅನುಮೋದನೆಯನ್ನು ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ. 1994-95ನೇ ಸಾಲಿನಲ್ಲಿ ನೇಮಕ ಮಾಡಿರುವ ಅರೆಕಾಲಿಕ ಉಪನ್ಯಾಸಕರನ್ನು 1995-96ನೇ ಸಾಲಿನಲ್ಲಿಯೂ ಈ ಕಾಲೇಜಿನಲ್ಲಿ ಮುಂದುವರೆಸಿಕೊಂಡು ಹೋಗಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಇತ್ತೀಚೆಗೆ ಉಪನ್ಯಾಸಕರ ಆಯ್ಕೆ ಪಟ್ಟಿ ಬಂದಿದ್ದು ಅವರಿಗೆ ನೇಮಕಾತಿ ಕೊಡುವ ಸಮಯದಲ್ಲಿ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಹಸಿರು ಕಾರ್ಡಿನಲ್ಲಿ ಕಡಿತ ಮತ್ತು ಸತ್ತವರ ಹೆಸರಿನಲ್ಲಿ ಕಾರ್ಡು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ಹಿಂದೆ ಮಂಜೂರು ಮಾಡಿದ ಹಸಿರು ಕಾರ್ಡುಗಳಲ್ಲಿ ಕುಂದಾಪುರ ತಾಲ್ಲೂಕಿನ ಪ್ರತಿಗ್ರಾಮದಲ್ಲಿ ಕಡಿಮೆ ಅಂದರೆ 20-25 ಕಾರ್ಡುಗಳನ್ನು ರದ್ದು ಮಾಡಲಾಗಿದೆ. ರದ್ದಾಗಿರುವ ಮಾನದಂಡ ಫಲಾನುಭವಿಗಳಿಗೆ ಸರಿಯಾಗಿ ತಿಳಿದಿಲ್ಲ. ಬಡವರ ಹಸಿರು ಕಾರ್ಡನ್ನು ರದ್ದು ಪಡಿಸಿ ಶ್ರೀಮಂತರಿಗೆ ಕೊಡತಕ್ಕ ಭ್ರಷ್ಟ ಮಾನದಂಡವನ್ನು ಉಪಯೋಗಿಸಲಾಗಿದೆ. ಇನ್ನು ಬಹಳಷ್ಟು ಜನರಿಗೆ ಸಂಶಯಾಸ್ಪದ ಪಟ್ಟಿ ಎನ್ನುವ ನೆಲೆಯಲ್ಲಿ ಹಸಿರು ಕಾರ್ಡುಗಳನ್ನು ತಡೆಹಿಡಿಯಲಾಗಿದೆ. ಮತದಾರರ ಪಟ್ಟಿಯಲ್ಲಿ ಅವರ ಹೆಸರಿಲ್ಲ; ಐ.ಆರ್.ಡಿ.ಪಿ. ಪಟ್ಟಿಯಲ್ಲಿ ಅವರ ಹೆಸರಿಲ್ಲ ಎಂಬ ಕಾರಣದಿಂದ ತಡೆ ಹಿಡಿಯಲಾಗಿದೆ. ಆದರೆ ಹಿಂದಿನ ಮತದಾರರ ಪಟ್ಟಿಯಲ್ಲಿ ಅವರ ಹೆಸರಿದ್ದು, ಈಗಿನ ಮತದಾರರ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಸೇರಿಸತಕ್ಕ ಕೆಲಸ ಮಾಡದಿರುವುದು ಖಂಡನೀಯ. ಅವರು ಇರುವಿಕೆಯನ್ನು ಗಮನಿಸಿ ಅವರ ಬಡತನದ ಅರ್ಹತೆಯ ಮೇಲೆ ಹಸಿರು ಕಾರ್ಡನ್ನು ಮಂಜೂರು ಮಾಡಿ ವಿತರಿಸಬೇಕು. ಹಸಿರು ಕಾರ್ಡು ಫಲಾನುಭವಿಗಳಿಗೆ ವಿತರಣೆ ಮಾಡದೇ ಕಿರುಕುಳ ಕೊಡುವುದನ್ನು ತಪ್ಪಿಸಲು ಹಿಂದಿನ ಮತದಾರರ ಪಟ್ಟಿಯು ಆಧಾರದ ಮೇಲೆ ಹಸಿರು ಕಾರ್ಡನ್ನು ಶೀಘ್ರ ಮಂಜೂರು ಮಾಡಿ ವಿತರಣೆ ಮಾಡುವುದು ಸೂಕ್ತ. ಅರ್ದ ಕಾರ್ಡಿನ ಫಲಾನುಭವಿಗಳಿಗೆ ಸಕಾಲದಲ್ಲಿ ಕಾರ್ಡು ವಿತರಣೆಯಾಗುತ್ತಿಲ್ಲ. ಕೇಳಿದರೆ ಕಾರ್ಡುಗಳ ಅಭಾವ. ಪ್ರಿಂಟ್ ಆಗಿಲ್ಲ ಎಂಬ ಸಬೂಬು ಹೇಳಿ ಜನರನ್ನು ತ್ರಿಶಂಕು ಸ್ಥಿತಿಗೆ ತಳ್ಳಲಾಗಿದೆ. ಮನೆಯ ಯಜಮಾನ ಸತ್ತಲ್ಲಿ ಕಾರ್ಡನ್ನು ಬದಲಾವಣೆ ಮಾಡುವಂತೆ ಅರ್ಜಿ ಸಲ್ಲಿಸಿದರೂ ಸತ್ತವರ ಹೆಸರಿನಲ್ಲೇ ಕಾರ್ಡನ್ನು ಮಂಜೂರು ಮಾಡುವ ವ್ಯವಸ್ಥೆ ನೋಡಿದರೆ ಕಾರ್ಡನ್ನು ವಿತರಣೆ ಮಾಡುವ

ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಮತ್ತೆ ಯಜಮಾನರನ್ನೇ ಕರೆದು ತನ್ನಿ ಎನ್ನುವ ಒತ್ತಾಯದಿಂದ ಕಾರ್ಡುದಾರರು ರೋಸಿ ಹೋಗಿದ್ದಾರೆ. ಆದ್ದರಿಂದ ಕಾರ್ಡು ಬದಲಾವಣೆ ಜನರಿಗೆ ವರವಾಗಬೇಕೇ ಹೊರತು ಶಾಪವಾಗಬಾರದು. ಕಾರ್ಡು ಇದ್ದಷ್ಟೇ ಬಡವರನ್ನು ಗುರುತಿಸುವುದನ್ನು ಬಿಟ್ಟು ಬಡವರಿದ್ದಷ್ಟು ಕಾರ್ಡನ್ನು ನೀಡುವ ವ್ಯವಸ್ಥೆ ಮಾಡಬೇಕು. ಆದಷ್ಟು ಶೀಘ್ರ ಸರಿಯಾಗಿ ಹಸಿರು ಕಾರ್ಡುಗಳನ್ನು ಫಲಾನುಭವಿಗಳಿಗೆ ಹಂಚಿ ಸರಿಯಾಗಿ ಪಡಿತರ ಸಾಮಗ್ರಿ ಸಿಗುವಂತೆ ಮಾಡಬೇಕಾಗಿ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

+ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿಯಮ 351ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ನೋಟೀಸ್ ಬಹಳ ತಡವಾಗಿ ನನ್ನ ಕೈ ತಲುಪಿತು. ಇದಕ್ಕೆ ಉತ್ತರವನ್ನು ಆಂಗ್ಲ ಭಾಷೆಯಲ್ಲಿ ಮಾತ್ರ ಸಿದ್ಧಪಡಿಸಲಾಗಿದೆ. ತಾವು ಅನುಮತಿಯನ್ನು ಕೊಟ್ಟರೆ ನಾನು ಅದನ್ನು ಇಲ್ಲಿ ಓದುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜರವರು ಸದನದಲ್ಲಿ ಹಾಜರಿಲ್ಲ. ಆದ್ದರಿಂದ ಬೇಗ ತಮ್ಮ ಉತ್ತರವನ್ನು ಓದಿಬಿಡಿ.

SRI S. NANJAPPA (Minister for Food & Civil Supplies) : The total number of Tri. colour cards existing in Dakshina Kannada as on 1.4.1995, before their replacement by green cards was 1,58,941. A decision was taken to replace these with the new green colour cards and also to weed out ineligible and bogus cards during the process of repalcement.

The verification was carried on in the State in 3 Stages.

1) Conducting Grama Sabhas at the Gram Panchayath level and delete those ineligible as indicated by the Grama Sabhas.

In Dakshina Kannada Grama Sabhas were conducted in all the 346 Gram Panchayathas during October 1995 and on the recommendation of the Grama Sabhas, 7,890 cards were deleted as they were ineligible.

2) Verification of the list existing tri. colour cards vis-a-vis, upto-date I.R.D.P. list and the latest electrol roll available with the Zilla Panchayaths and the Deputy Commissioner's Office respectively.

As the IRDP beneficiary list was found not to be correct, they were instructed not to relay on it.

The Deputy Commissioners were requested to verify the existing list of tri. colour cards only with the electrol rolls.

As per the verification of the Electrol list in Dakshina Kannada, 12,737 cases were kept aside as doubtful cases in the month of November 1995. These were inspected in the month of January and February 1996 and 11,12 were found to be eligible and only 1,612 ineligible.

3) House to house verification of all the new applications received in the Grama Sabhas to identify the eligible candidates for issue of green cards.

In Dakshina Kannada, 38,126 new applications were received for green cards during the Gram Sabhas conducted. These were inspected in the month of January-February 1996 and 29,507 have been identified as genuine cases and 8,619 have been deleted as ineligible or duplicate applications.

NUMBER OF GREEN CARDS ISSUED :

Cards were printed and new green cards numbering 1,76,573 were sent to Dakshina kannada District in August 1995 to replace the clear cases found after the Gram Sabhas deletion and after the deletion during the electrol rolls- verification. 1,38,314 green cards were thus replaced in the month of November 1995, in the rural areas. 1,381 eligible persons in the urban area have also been replaced with green colour cards during the same month. 11,125 persons found eligible after spot inspection out of the 12,737 doubtful cases were also replaced with green colour cards.

To Dakshina Kannada 1,95,580 saffron cards have also been despatched during the months of November 1995 and January 1996, so taht whoever have been rejected for green cards can be issued with the saffron cards.

Regarding the 29,507 new applications selected as eligible the district is still left with adequate number of cards for writing and distribution. They are presently engaged in this work.

Wherever menfolks were not available during house-visit and

inspections, women folks were encouraged to apply and cards were sanctioned in their names. Hence the complaint that deceased persons were called to issue ration cards cannot be true. Any such specific instances, if brought to the notice, action will be taken to set it right.

PARTICULARS ABOUT THE GREEN CARDS IN KUNDAPUR TALUK, DAKSHINA KANNADA DISTRICT.

1.	Existing tricolour cards	...	31,634
2.	Deletion in Gram Sabhas	...	663
3.	Number verified with Electorol Rolls	...	30,971
4.	Cards declared as doubtful	...	6,215
5.	Doubtful cases found eligible after inspection	...	4,646
6.	Ineligible and rejected	...	1,569
7.	Number of green cards replaced so far	...	30,000

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕಾರ್ಡ್‌ಇಲ್ಲ ಎಂದು ಹೇಳಿ ಕಾರ್ಡ್‌ನ್ನು ಕೊಡುತ್ತಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ನಾವು ಸಾಕಷ್ಟು ಕಾರ್ಡುಗಳನ್ನು ಕೊಟ್ಟಿದ್ದೇವೆ. ಕಾರ್ಡುಗಳು ಇನ್ನೂ ಹಂಚಿಕೆ ಆಗಬೇಕಾಗಿರುವುದು ಅಲ್ಲಿ ಇವೆ. ಕಾರ್ಡ ಇಲ್ಲ ಎಂದು ನಿರಾಕರಣೆ ಮಾಡುವ ಪ್ರಶ್ನೆ ಇಲ್ಲ ಎಂದು ಹೇಳುತ್ತೇನೆ. ಮತ್ತು ಏನಾದರೂ ನಿರ್ದಿಷ್ಟವಾದ ಪ್ರಕರಣದಲ್ಲಿ ಸತ್ತವರ ಹೆಸರಿನಲ್ಲಿ ಕಾರ್ಡ ಕೊಟ್ಟರೆ ಅದು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

1990-91ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮಾರಾಟ ನಿಷೇಧ ಕಾಯಿದೆ ಜಾರಿ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, 1990-91ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮಾರಾಟ ನಿಶೇಧ ಕಾಯಿದೆಯನ್ನು ಜಾರಿಗೆ ತಂದು ಅಬಕಾರಿ ಗುತ್ತಿಗೆದಾರರಿಂದ ಹೆಚ್ಚುವರಿ ಮಾಸಿಕ ಬಾಡಿಗೆಯನ್ನು ನಿಗಧಿ ಪಡಿಸಿದ್ದು ನಿಜವೇ? ಆದರೆ ಇದೇ ವರ್ಷ ಸೇಂದಿ ಮುಕ್ತ ಮಾರಾಟದ ಚಳವಳಿಯಿಂದ ಸೇಂದಿ ಮುಕ್ತ ಮಾರಾಟವಾಗಿ ಅಬಕಾರಿ ಗುತ್ತಿಗೆದಾರರಿಗೆ ನಷ್ಟವಾಗಿದೆ ಎಂಬ ವಾದವನ್ನು ಸರಕಾರ ಗಮನಿಸಿ ಅವರಿಗೆ ಆದ ನಷ್ಟವನ್ನು ಸರ್ಕಾರ ಒಪ್ಪಿದೆಯೇ? ಒಪ್ಪಿದೆಯೆಂದರೆ ಸರ್ಕಾರ ಈ ಬಗ್ಗೆ ಏನುಕ್ರಮ ಕೈಗೊಳ್ಳಲಾಗಿದೆ ಎಂದು ಸನ್ಮಾನ್ಯ ಸಚಿವರು ತಿಳಿಸಬೇಕೆಂದು ವಿನಂತಿ.

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು